# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಬಳಗ ಸೊಸೈಟಿ, ರೂರಲ ಆಯುರ್ವೇದ ಮೆಡಿಕಲ ಕಾಲೇಜು, ಬೆಳಗಾಂ ಇಲ್ಲಿಗೆ ಬಿ ಎ ಎಂ ಎಸ್ ಸೀಟಿನ ಪ್ರವೇಶ ಮಿತಿಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಆಕುಕ 120 ಪಿಟಿಡಿ 2004, ದಿನಾಂಕ:12.8.2005.
2) ಪ್ರಸಿ., ಕನ್ನಡ ಬಳಗ ಸೊಸೈಟಿ ಇವರ ಪತ್ರ, ದಿನಾಂಕ: 10.7.2006.

ಪ್ರಸ್ತಾವನೆ:

ಮೇಲೆ ಕ್ರ.ಸಂ.(1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕನ್ನಡ ಬಳಗ ಸೊಸೈಟಿ ರೂರಲ ಆಯುರ್ವೇದಿಕ ವೈದ್ಯಕೀಯ ಕಾಲೇಜು, ಬೆಳಗಾಂ ಇಲ್ಲಿಗೆ 2005-06ನೇ ಶೈಕ್ಷಣಿಕ ಸಾಲಿನಿಂದ ಬಿ ಎ ಎಂ ಎಸ್ ಕೋರ್ಸಿನ ಪ್ರವೇಶ ಮಿತಿಯನ್ನು 40 ರಿಂದ 50ಕ್ಕೆ ಹೆಚ್ಚಿಸಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ (2) ಪತ್ರದಲ್ಲಿ ಪ್ರಸಿ., ಕನ್ನಡ ಬಳಗ ಸೊಸೈಟಿಯ ರೂರಲ ಆಯುರ್ವೇದಿಕ ಕಾಲೇಜು ಮತ್ತು ರಿಸರ್ಚ ಸೆಂಟರ, ಬೆಳಗಾಂ ಇವರು ಮನವಿಯನ್ನು ಸಲ್ಲಿಸಿ ಅವರ ಕಾಲೇಜಿನ ಬಿ ಎ ಎಂ ಎಸ್ ಪ್ರವೇಶ ಮಿತಿಯನ್ನು 50 ರಿಂದ 70ಕ್ಕೆ ಹೆಚ್ಚಿಸುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 120 ಪಿಟಿಡಿ 2004, ಬೆಂಗಳೂರು, ದಿನಾಂಕ:14.09.2006

1994ನೇ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45ನೇ ಪ್ರಕರಣದ (5)ನೇ ಉಪ ಪ್ರಕರಣದಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕನ್ನಡ ಬಳಗ ಸೊಸೈಟಿ, ರೂರಲ ಆಯುರ್ವೇದಿಕ ವೈದ್ಯಕೀಯ ಕಾಲೇಜು, ಬೆಳಗಾಂ ಇಲ್ಲಿಗೆ 2006-07ನೇ ಶೈಕ್ಷಣಿಕ ಸಾಲಿನಿಂದ ಬಿ ಎ ಎಂ ಎಸ್ ಕೋರ್ಸಿನ ಪ್ರವೇಶ ಮಿತಿಯನ್ನು 50 ರಿಂದ 60ಕ್ಕೆ (ಹತ್ತು ಸೀಟುಗಳು) ಹೆಚ್ಚಿಸಲು ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟು ಸಂಯೋಜನೆ ನೀಡಲು ಶಿಫಾರಸ್ಸು ಮಾಡಿದೆ.

1) ಭಾರತೀಯ ವೈದ್ಯಕೀಯ ಕೇಂದ್ರೀಯ ಪರಿಷತ್ತು, ನವದೆಹಲಿ ಇವರ ಅನುಮೋದನೆ ಪಡೆಯತಕ್ಕದ್ದು
2) ಸಂಸ್ಥೆಯವರು, ಸರ್ಕಾರವು ನಿಗಧಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗೆ ಮಾತ್ರ ಸೀಮಿತವಾಗಿರುತ್ತದೆ. ನಿಗಧಿಪಡಿಸಿರುವ ಪ್ರವೇಶ ಸಂಖ್ಯೆಗಿಂತ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಲ್ಲಿ ಸಂಬಂಧಿಸಿದ ಸಂಸ್ಥೆಯವರೇ ಹೊಣೆಗಾರರನ್ನಾಗಿ ಮಾಡುವುದು
3) ಭಾರತೀಯ ವೈದ್ಯಕೀಯ ಕೇಂದ್ರೀಯ ಪರಿಷತ್ತು, ನವದೆಹಲಿ ಇವರು ನಿಗಧಿಪಡಿಸಿರುವ ಕನಿಷ್ಟ ಸೌಲಭ್ಯಗಳನ್ನು ಒದಗಿಸತಕ್ಕದ್ದು
4) ಸದರಿ ಕೋರ್ಸಿಗೆ ಸಂಬಂಧಿಸಿದಂತೆ ಕಾಲೇಜುಗಳಿಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಹಾಗೂ ಸೌಲಭ್ಯ ನೀಡಲಾಗುವುದಿಲ್ಲ
5) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಆಯುಷ ಇಲಾಖೆ ನವದೆಹಲಿ ಇವರ ಅನುಮತಿ ಪಡೆಯತಕ್ಕದ್ದು
6) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು

Principal
Rural Ayurvedic Medical College
& Hospital, Auto Nagar, Belagavi

7) ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಸಂಯೋಜನೆಯ ಬಗ್ಗೆ ವಿಧಿಸುವ ಷರತ್ತುಗಳನ್ನು ನಿಗದಿತ ಅವಧಿಯೊಳಗೆ ಪೂರೈಸತಕ್ಕದ್ದು

8) ಸರ್ಕಾರದ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದರೂ ಸಹ ಸಂಯೋಜನೆ:ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

14.09.01

(ಎಸ್.ಎನ್.ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪ್ರತಿಗೆ:

1) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು
2) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ ಧನ್ವಂತರಿ ರಸ್ತೆ, ಬೆಂಗಳೂರು-9
3) ಪ್ರಾಂಶುಪಾಲರು, ಕನ್ನಡ ಬಳಗ ಸಂಸ್ಥೆಯ ರೂರಲ್ ಆಯುರ್ವೇದಿಕ್ ವೈದ್ಯಕೀಯ ಕಾಲೇಜ್, ಬೆಳಗಾಂ
4) Secretary, Central Council of Indian Medicines, Institutional Area, Janakpuri, New Delhi- 110 058
5) The Secretary, Government of India, Ministry of Health & Family Welfare, Department of Indian System of Medicine and Homoeopathy EP Cell, IRC Building, New Delhi-110 001
6) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
7) ಸರ್ಕಾರದ ಕಾರ್ಯದರ್ಶಿಗಳು : ಉಪ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ
8) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

Badiger

Principal
Rural Ayurvedic Medical College
& Hospital, Auto Nagar, Belagavi.